ದೈಹಿಕವಾಗಿಯೂ ಮಾನಸಿಕವಾಗಿಯೂ ವ್ಯಥೆಪಡುವುದನ್ನು ನೋಡಿ ಆತ್ಮಸಂಯಮವನ್ನು ಅಭ್ಯಾಸ ಮಾಡುವವನು ಉತ್ತಮ. ತಾನು ದುಃಖವನ್ನು ಅನುಭವಿಸಿ ಅನಂತರ ಆತ್ಮಸಂಯಮ ಮಾಡುವವನು ಮಧ್ಯಮ. ತಾನು ಅನುಭವಿಸಿಯೂ ಪಾಠವನ್ನು ಕಲಿಯದೆ ಇಂದ್ರಿಯ ಲೋಲುಪತೆಯಲ್ಲಿ ಮಗ್ನನಾಗುವವನು ಅಧಮ. ನಾವು ಕೊನೆಯ ಪಕ್ಷ ಮಧ್ಯಮ ವರ್ಗಕ್ಕಾದರೂ ಸೇರಿದವರಾಗಿರೋಣ.

**ಆದರ್ಶ**: ಜೀವನದಲ್ಲಿ ನಾವು ಯಾವ ಆದರ್ಶವನ್ನು ಇಟ್ಟುಕೊಳ್ಳುತ್ತೇವೆ ಎಂಬುದು ಅತ್ಯಂತ ಮುಖ್ಯ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: 'ಆದರ್ಶವಿರುವ ಮನುಷ್ಯ ಸಾವಿರ ತಪ್ಪುಗಳನ್ನು ಮಾಡಿದರೆ, ಆದರ್ಶವಿಲ್ಲದವನು ಐವತ್ತು ಸಾವಿರ ತಪ್ಪುಗಳನ್ನು ಮಾಡುತ್ತಾನೆ. ಆದಕಾರಣ ಒಂದು ಆದರ್ಶವಿರುವುದು ಮೇಲು. ಈ ಆದರ್ಶ ನಮ್ಮ ಹೃದ್ಗತವಾಗಿ ನಮ್ಮ ರಕ್ತನಾಳಗಳಲ್ಲೆಲ್ಲ ಸಂಚರಿಸಿ ಪ್ರತಿಯೊಂದು ರಕ್ತಕಣವೂ ಈ ಭಾವನೆಯಿಂದ ಅನುರಣಿತವಾಗಿ ನಮ್ಮ ದೇಹದ ಅಂಗೋಪಾಂಗಗಳಲೆಲ್ಲ ಸಂಚರಿಸುವ ತನಕ ಅದನ್ನು ನಾವು ಕೇಳಬೇಕು, ಅದನ್ನು ಕುರಿತು ಧ್ಯಾನಿಸಬೇಕು.'

(ಕೃ. ಶ್ರೇ. ೨.೮೮)

ಅತ್ಯಂತ ಅಧಮ ವ್ಯಕ್ತಿಯೂ ಆಧ್ಯಾತ್ಮಿಕ ಆದರ್ಶವನ್ನು ತೆಗೆದುಕೊಂಡರೆ ಕ್ರಮೇಣ ಅವನ ಜೀವನದಲ್ಲಿ ಬದಲಾವಣೆಯುಂಟಾಗಿ ಅವನು ಅತ್ಯುತ್ತಮ ವ್ಯಕ್ತಿಯಾಗಬಹುದು. ಗೀತೆಯಲ್ಲಿ ಶ್ರೀಕೃಷ್ಣನು ಹೇಳುತ್ತಾನೆ:

**ಅಪಿ ಚೇತ್ ಸುದುರಾಚಾರೋ ಭಜತೇ ಮಾಮನನ್ಯಭಾಕ್ |**
**ಸಾಧುರೇವ ಸ ಮಂತವ್ಯಃ ಸಮ್ಯಕ್ ವ್ಯವಸಿತೋ ಹಿ ಸಃ ||**
**ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ |**

(ಭಗವದ್ಗೀತೆ, ೯.೩೦-೩೧)

'ಅತ್ಯಂತ ದುರಾಚಾರಿಯಾಗಿದ್ದರೂ ಅನನ್ಯ ಭಕ್ತಿಯಿಂದ ನನ್ನನ್ನು ಭಜಿಸಿದರೆ, ಅವನು ಸಾಧುವೆಂದೇ ತಿಳಿಯತಕ್ಕದ್ದು; ಏಕೆಂದರೆ ಅವನು ನಿಶ್ಚಯ ಬುದ್ಧಿಯುಳ್ಳವನಾಗಿರುತ್ತಾನೆ, ಅವನು ಬೇಗನೆ ಧರ್ಮಾತ್ಮನಾಗುತ್ತಾನೆ, ಶಾಶ್ವತವಾದ ಶಾಂತಿಯನ್ನು ಹೊಂದುತ್ತಾನೆ.'

ಕೆಲಸ, ಶಿಕ್ಷಣ, ಅನುಭವ ಮತ್ತು ವಾತಾವರಣ ಇವು ವರ್ತಮಾನವನ್ನೂ ಸಂಸ್ಕಾರಗಳು ಭೂತಕಾಲವನ್ನೂ ಆದರ್ಶವು ಭವಿಷ್ಯತ್ ಕಾಲವನ್ನೂ ಸೂಚಿಸುತ್ತವೆ. ಆದ್ದರಿಂದ ವ್ಯಕ್ತಿತ್ವ ನಿರ್ಮಾಣದಲ್ಲಿ ಭೂತ-ವರ್ತಮಾನ-ಭವಿಷ್ಯ ಈ ಮೂರೂ ಪ್ರಧಾನ ಅಂಶಗಳು. *(ಮುಂದುವರಿಯುವುದು)*

—ಸಂ.

# ಬೆಳಗಾವಿಯಲ್ಲಿ ರಾಮಕೃಷ್ಣ ಮಹಾಸಂಘದ ನೂತನ ಕೇಂದ್ರ



ಸ್ವಾಮಿ ವಿವೇಕಾನಂದರು ತಂಗಿದ್ದ ಶ್ರೀಹರಿಪದ ಮಿತ್ರರ ಗೃಹ

**ಸ್ವಾಮಿ ವಿವೇಕಾನಂದರು** ೧೮೯೨ರಲ್ಲಿ ತಮ್ಮ ಪರಿವ್ರಾಜಕ ದಿನಗಳಲ್ಲಿ ಬೆಳಗಾವಿಗೆ ಭೇಟಿಯಿತ್ತಿದ್ದರು. ಅವರು ಶ್ರೀ ಭಾಟೆ ಮತ್ತು ಶ್ರೀ ಹರಿಪದ ಮಿತ್ರರ ಮನೆಯಲ್ಲಿ ತಂಗಿದ್ದರು. ಅರಣ್ಯಾಧಿಕಾರಿಗಳಾಗಿದ್ದ ಹರಿಪದ ಮಿತ್ರರ ಮನೆಯಲ್ಲಿ ಅವರು ಐದು ದಿನಗಳಿದ್ದರು. ಆ ಮನೆ ಮತ್ತು ಅದಕ್ಕೆ ಸಂಬಂಧಿಸಿದ ಭೂಮಿ ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆಗೆ ಸೇರಿತ್ತು.

ಬೆಳಗಾವಿಯಲ್ಲಿ ಒಂದು ಕೇಂದ್ರವನ್ನು ಸ್ಥಾಪಿಸುವ ಉದ್ದೇಶವನ್ನು ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಯುತ ಎಸ್.ಎಂ.ಕೃಷ್ಣ ಅವರಲ್ಲಿ ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ರಂಗನಾಥಾನಂದಜೀಯವರು ಪ್ರಸ್ತಾಪಿಸಿದಾಗ, ಅವರು ಸಂತೋಷದಿಂದ ಒಪ್ಪಿಕೊಂಡು ಆ ಕಟ್ಟಡ ಮತ್ತು ಜಾಗವನ್ನು ಸಂಘಕ್ಕೆ ಬಳುವಳಿಯಾಗಿ ನೀಡಿದರು.

೧.೬.೨೦೦೦ದಂದು ಬೆಳಗ್ಗೆ ೧೦.೩೦ಕ್ಕೆ ಆ ಕಟ್ಟಡವನ್ನು ಸಂಘಕ್ಕೆ ಅಧಿಕೃತವಾಗಿ ಒಪ್ಪಿಸಲಾಯಿತು. ಇದಕ್ಕಾಗಿ ಒಂದು ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಹಿಂದೆ ವಿಶ್ವಬ್ಯಾಂಕ್‌ನಲ್ಲಿದ್ದ ಶ್ರೀಯುತ ಎಂ.ಎಸ್.ನಂಜುಂಡಯ್ಯನವರು ಮಾತನಾಡಿ, ಈ ಆಸ್ತಿಯನ್ನು ಸಂಘಕ್ಕೆ ನೀಡುವುದರಲ್ಲಿ ಸಹಕರಿಸಿದ ಸರ್ಕಾರಿ ಅಧಿಕಾರಿಗಳೆಲ್ಲರನ್ನು ಅಭಿನಂದಿಸಿದರು. ಆ ಆಸ್ತಿಯನ್ನು ರಾಮಕೃಷ್ಣ ಮಹಾಸಂಘವು ಪಡೆಯುವುದರಲ್ಲಿ ಅವಿರತವಾಗಿ ತಮ್ಮನ್ನು ತೊಡಗಿಸಿಕೊಂಡ ಶ್ರೀ ನಂಜುಂಡಯ್ಯನವರ ಶ್ರಮವನ್ನು ಮರೆಯುವಂತಿಲ್ಲ.

ಸರ್ಕಾರದ ಪರವಾಗಿ ಬೆಳಗಾವಿ ಜಿಲ್ಲಾ ಅರಣ್ಯಾಧಿಕಾರಿಗಳು ಆಸ್ತಿಯ ಹಕ್ಕುಪತ್ರಗಳಿಗೆ ಸಹಿ ಹಾಕಿದರು; ರಾಮಕೃಷ್ಣ ಮಹಾಸಂಘದ ಪರವಾಗಿ ಪ್ರಸಕ್ತ ಪೊನ್ನಂಪೇಟೆಯಲ್ಲಿ ಶ್ರೀರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರಾಗಿರುವ ಸ್ವಾಮಿ ಪುರುಷೋತ್ತಮಾನಂದಜೀಯವರು ಸಹಿ ಹಾಕಿದರು.

ಪುಣೆಯ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಭೌಮಾನಂದಜಿ, ಬೆಂಗಳೂರಿನ ಅಲಸೂರು ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ರಾಘವೇಶಾನಂದಜಿ ಮತ್ತು ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜಿ ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಬೆಳಗಾವಿಯಲ್ಲಿ 'ರಾಮಕೃಷ್ಣ ವಿವೇಕಾನಂದ ಸೇವಾಶ್ರಮ'ವನ್ನು ನೋಡಿಕೊಳ್ಳುತ್ತಿರುವ ಶ್ರೀ ವರುಣ್ ಸರ್ಕಾರ್ ಅವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸಿದ್ದರು.

ಇದೇ ಸಂದರ್ಭದಲ್ಲಿ ಬೆಳಗಾವಿನ IMA ಸಭಾಂಗಣದಲ್ಲಿ ಒಂದನೇ ಮತ್ತು ಎರಡನೇ ತಾರೀಖಿನ ಸಂಜೆ ವಿಶೇಷ ಉಪನ್ಯಾಸ ಮತ್ತು ಭಜನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಸಾರ್ವಜನಿಕರು ಬಹು ಸಂಖ್ಯೆಯಲ್ಲಿ ಅದರಲ್ಲಿ ಭಾಗವಹಿಸಿದ್ದರು. ▼